# ಇದು ಉಪ್ಪಿ ಸ್ಟೈಲ್ ಪಾಲಿಟಿಕ್ಸ್

29ನೇ ಪುಟದಿಂದ

ಬೆಳಸೋದ್ರಲ್ಲಿ ದೇಶ ಗೀಶ ಮರೆತೇ ಬಿಟ್ಟಿದ್ದೀವಿ. ಎಲ್ಲರೂ ಹೇಳೋದು ನಮ್ಮ ಪಕ್ಷ ಬ್ರ್ಯಾಂಡ್ ಆಗಬೇಕು ಅಂತ. ನಾನು ಎರಡೇ ಹೇಳೋದು– ಆಡಳಿತ ಅಂತ ಇದೆ, ಅದಕ್ಕೆ ಜನಪ್ರತಿನಿಧಿಗಳು ಆಯ್ಕೆ ಆಗಿ ಹೋಗಬೇಕು. candidates ನಿಲ್ಲಬೇಕು ಅಲ್ವಾ? ಸರಿ. ಒಂದು ಸರ್ತಿ ಎಲೆಕ್ಷನ್ ಆದ ಮೇಲೆ ಪಕ್ಷ ಏನಕ್ಕೆ ಬೇಕು?

★ *ಪಕ್ಷದ ವಿಚಾರ ಪ್ರಚಾರ ಮಾಡಲು ಸಂಘಟನೆ ಬೇಡವೆ?*

ಯಾವ ವಿಚಾರ? ಪಕ್ಷಕ್ಕೆ ಬೇರೆ ವಿಚಾರ ಇಲ್ಲ. ನೀವು ಎಲೆಕ್ಟ್ ಮಾಡಲಿಲ್ಲ ಎಂದರೆ ಆ ವಿಚಾರಗಳನ್ನು ರಿಜೆಕ್ಟ್ ಮಾಡಿದ್ದೀರಿ ಅಂತ. ಮುಂದೆ ನನಗೆ ಪಕ್ಷದಲ್ಲಿ ಕೆಲಸ ಇಲ್ಲ. ಮತ್ತೆ ಎಲೆಕ್ಷನ್ ಬಂದಾಗ ಟ್ರೈ ಮಾಡ್ತೀನಿ. ನಾವು ಈಗ ಟ್ಯಾಕ್ಸ್ ಕಟ್ಟುವುದು ಏಕೆ? ಆಡಳಿತ ಚೆನ್ನಾಗಿ ಮಾಡೋದಕ್ಕೆ. ಅದು ಬಿಟ್ಟು ಬೇರೆ ವಿಚಾರ ನಿಮ್ಮ ಪರ್ಸನಲ್. ಸಮಾಜಸೇವೆ ಬೇರೆ. ನಾನು ಇಷ್ಟ ಬಂದ ಹಾಗೆ ಹೆಲ್ಪ್ ಮಾಡ್ತೀನಿ. ಅದಕ್ಕೆ ಪಬ್ಲಿಸಿಟಿ ಕೊಡಬೇಕಾಗಿಲ್ಲ. ಪಬ್ಲಿಸಿಟಿ ಅಂದರೆ ಮತ್ತೆ ಬಿಸಿನೆಸ್, ಹಣ ಖರ್ಚು ಮಾಡೋದು, ಅದನ್ನು ಗಳಿಸೋದಕ್ಕೆ ಮತ್ತೆ ದುಡ್ಡು ಮಾಡೋದು. ಇದೆಲ್ಲ ನಮ್ಮ ಪಕ್ಷಕ್ಕೆ ಅಗತ್ಯವಿಲ್ಲ. ಶಾಸಕ ಆಗೋದು ಅಂದರೆ ಸಂಬಳದ ಕೆಲಸ. ಇಲ್ಲಿ ನಿಮಗೆ ಸಂಬಳ, ಕಾರು ಏಕೆ ಕೊಡ್ತಾರೆ? ನಿಮ್ಮ ಕೆಲಸ ಸರಿಯಾಗಿ ಮಾಡಿ ಅಂತ. ಡ್ರೈವರ್ ಸರಿಯಾಗಿ ಕಾರು ಓಡಿಸಿದ್ರೆ ಸಾಕು, ಅವನ ಜಾತಿ, ಅವನು ಶೂ ಹಾಕ್ತಾನಾ ಚಪ್ಪಲಿ ಹಾಕ್ತಾನಾ ಅನ್ನೋದೆಲ್ಲ ನಮಗೆ ಏಕೆ ಬೇಕು? ಜನರ ಹಣ ಜನರಿಗೆ ತಲುಪಿಸಲು ನೀವು bridge ಆಗಿ ಕೆಲಸ ಮಾಡಬೇಕು ಅಷ್ಟೆ. ನಮಗೆ ನಾಯಕರು ಬೇಡ, ಸೇವಕರು ಬೇಡ. ಕಾರ್ಮಿಕರು ಬೇಕು. ಸಂಬಳ ತಗೊಂಡು ನಿಮ್ಮ ಡ್ಯೂಟಿ ಕರೆಕ್ಟಾಗಿ ಮಾಡಿ ಹೊರಟ್ಹೋಗಬೇಕು.



★ *ಈಗಾಗಲೆ ರಾಜ್ಯದ ಒಂದು ಪ್ರವಾಸ ಆಯ್ತಲ್ಲ..? ಜನ ಏನಂತಾರೆ?*

ವಿಧಾನಸೌಧದಿಂದ ಸುವರ್ಣಸೌಧವರೆಗೆ ಪ್ರವಾಸ ಹೋಗಿ ಜನರನ್ನು ಮೀಟ್ ಮಾಡಿ ಮಾತಾಡಿದೆ. ಉಡುಪಿ, ಕುಂದಾಪುರ, ಮೈಸೂರು, ಚಾಮರಾಜನಗರ, ಹಿರಿಯೂರು, ಬೆಳಗಾವಿ ಹೀಗೆ ಪ್ರವಾಸ. ಯಾರನ್ನು ಕೇಳಿದ್ರೂ ನೀವು ಹೇಳಿದ್ದು ಕರೆಕ್ಟ್ ಅಂತಾರೆ. ಆದ್ರೆ ವರ್ಕ್‌ಔಟ್ ಆಗುತ್ತಾ ಅಂತಾನೂ ಕೇಳಿದ್ರು. ಕರೆಕ್ಟ್ ಅಂದ ಮೇಲೆ there matter ends. further ಆಲೋಚನೆ ಮಾಡಬಾರದು. ನಮ್ಮದು ಸಾರ್ವಜನಿಕ ಸಭೆ ಇಲ್ಲ. ಪತ್ರಿಕಾಗೋಷ್ಠಿ, ಹಳ್ಳಿಗಳಲ್ಲಿ ಜನರ ಜತೆ ಮಾತಾಡೋದು. ರ್‍ಯಾಲಿ ಎಂದರೆ ಮತ್ತೆ ಟ್ರಾಫಿಕ್ ಜಾಮ್, ಜನರಿಗೆ ತೊಂದರೆ, ದುಡ್ಡು ಖರ್ಚು. ವ್ಯಕ್ತಿಕೇಂದ್ರಿತ ಚರ್ಚೆ ಬೇಡ. ವಿಚಾರಗಳ ಬಗ್ಗೆ ಚರ್ಚೆ ಮಾಡೋಣ.

★ *ಏನು ನಿಮ್ಮ ಪಕ್ಷದ ವಿಚಾರಗಳು? ಪ್ರಣಾಳಿಕೆ ರೆಡಿ ಇದೆಯಾ?*

education, agriculture, health ಎಲ್ಲ ಕಡೆ ಸಮಸ್ಯೆಗಳಿವೆ. ಒಬ್ಬ ಎಂಜಿನಿಯರಿಂಗ್ ಓದ್ತಾನೆ. ಹೊರಗಡೆ ಐದು ಪೈಸೆ use ಆಗಲ್ಲ. ಮತ್ತೆ ಆರು ತಿಂಗಳ ಟ್ರೈನಿಂಗ್ ತಗೋತಾನೆ. ಕಂಠಪಾಠ ಮಾಡಿ ಮರೆಯೋದು. ಇದೆಲ್ಲ change ಆಗಲೇಬೇಕು. ಹೆಲ್ತ್, ಇನ್ಸೂರೆನ್ಸ್, ಕೃಷಿ. ರಾಸಾಯನಿಕ ಹೆಚ್ಚಾಗಿ ರೈತ ಆತ್ಮಹತ್ಯೆ ಮಾಡ್ತಿದಾನೆ. ಅದಕ್ಕೆ ಪ್ರಣಾಳಿಕೆ ಮಾಡ್ತಿದೀವಿ. ಒಂದು ಟೀಮ್ ಇದೆ. ಸಂಜೆ ಕುಳಿತುಕೊಂಡು ಚರ್ಚೆ ಮಾಡ್ತಿದೀವಿ.

★ *ರಾಜ್ಯದ ಎಲ್ಲ 224 ಕ್ಷೇತ್ರಗಳಲ್ಲೂ ನಿಮ್ಮ ಪಕ್ಷ ಸ್ಪರ್ಧಿಸುತ್ತದೆಯೆ? ಅಭ್ಯರ್ಥಿಗಳನ್ನು ಹೇಗೆ ಆಯ್ಕೆ ಮಾಡ್ತೀರಿ?*

ಬಹುತೇಕ ಎಲ್ಲ ಕಡೆಯಿಂದ ಅರ್ಜಿಗಳು ಬರುತ್ತಿವೆ. ನೋಡೋಣ. ಆಯಾ ಕ್ಷೇತ್ರದಲ್ಲಿ ಅಭ್ಯರ್ಥಿ ಮಾಡಿರುವ ಕೆಲಸ, ಮುಂದೆ ಅಭಿವೃದ್ಧಿ ಹೇಗೆ ಮಾಡಬೇಕು ಎನ್ನುವ ಬಗ್ಗೆ ಅವರು ಫೋಟೋ, ಪಿಪಿಟಿ, ವೀಡಿಯೊ ಮಾಡಿ ಕೊಡಬೇಕು. ಅದನ್ನು ಪರಿಶೀಲಿಸಿ ಅಭ್ಯರ್ಥಿಗಳ ಆಯ್ಕೆ ಮಾಡ್ತೀವಿ.

★ *ನೀವು ದುಡ್ಡು ಕೊಡಲ್ಲ. ಅವರವರು ಖರ್ಚು ಮಾಡಬಹುದಾ?*

ಇಲ್ಲ, ಅವರೂ ಖರ್ಚು ಮಾಡುವಂತಿಲ್ಲ. ದುಡ್ಡು, ಜಾತಿ ಹೊರತಾದ ಪಕ್ಷ ನಮ್ಮದು. ನಾವು ಯಾರನ್ನೂ ಬೈಯುವುದೂ ಇಲ್ಲ.

★ *ಸಿನಿಮಾ ಕ್ಷೇತ್ರದಿಂದ ಯಾರ ಬೆಂಬಲ ಪಡೆಯುತ್ತೀರಿ? ಈಗಾಗಲೆ ಹಲವು ನಟ ನಟಿಯರು ಬೇರೆ ಪಕ್ಷಗಳಿಗೆ ಸೇರಿದ್ದಾರಲ್ಲ?*

ನನ್ನದು ಸರಳ ವಿಚಾರ. ಯಶ್, ದಿಗಂತ್, ಶಿವಣ್ಣ ಮುಂತಾಗಿ ಈಗಾಗಲೆ ಕೆಲವರು ಸಪೋರ್ಟ್ ಮಾಡಿದ್ದಾರೆ. ಅವರನ್ನು ಪಕ್ಷಕ್ಕೆ ಕರೆತರುವ ವಿಚಾರ ಇಲ್ಲ. ಅವರವರ ಕೆಲಸ ಬಿಟ್ಟು ಬರಬೇಕಲ್ಲ? ಈಗಾಗಲೆ ಬೇರೆ ಪಕ್ಷ ಸೇರಿರುವ ನಟರ ಬಗ್ಗೆ ಏನೂ ಹೇಳೋದಿಲ್ಲ.

★ *225 ಕ್ಷೇತ್ರಗಳಲ್ಲೂ ಠೇವಣಿ ಹೋದ್ರೆ ಏನ್ ಮಾಡ್ತೀರಿ?*

ಬಹುಶಃ ನಾನ್ ಹೇಳಿದ್ದು ಕರೆಕ್ಟ್ ಇಲ್ಲವೋ ಏನೋ ಅಂದ್ಕೊತೀನಿ. ಮತ್ತೆ ಐದು ವರ್ಷದ ನಂತರ ಟ್ರೈ ಮಾಡ್ತೀನಿ. ನನ್ನ ಕರ್ತವ್ಯ ನಾನು ಮಾಡ್ತೀನಿ. ಯಾವುದಕ್ಕೂ hopes ಕಳೆದುಕೊಳ್ಳಬಾರದು. ಎಲೆಕ್ಷನ್ ಟೈಮಲ್ಲಿ ಬಂದು mushroom ತರಹ ಬೆಳೆದು ಓಡ್ಹೋಗ್ತಾರೆ ಎಂದು ಜನ ಅಂದ್ಕೋಬಹುದು. ಎಲೆಕ್ಷನ್ ಟೈಮಲ್ಲೇ ಬರಬೇಕು. ಆಮೇಲೆ ಪಾರ್ಟಿ ಇಟ್ಕೊಂಡು ನಾನೇನು ಮಾಡ್ಲಿ? ಬಿಸಿನೆಸ್ಸಾ?

★ *ಮನೆಯಲ್ಲಿ ಮೇಡಂ ಏನಂತಾರೆ? ಹೊಸ ಸಿನಿಮಾಗಳ ವಿಚಾರ?*

ಕಳೆದ ಹದಿನೈದು ವರ್ಷಗಳಿಂದ ಈ ವಿಚಾರ ಹೇಳಿ ಹೇಳಿ ಅವರ ತಲೆ ಸಾಕಷ್ಟು ತಿಂದಿದ್ದೀನಿ. (ನಗು) ಅವರಿಗೂ ಸಾಕಾಗಿದೆ. ನೀವು ಮಾಡೋದು ಸರಿಯಾಗಿದೆ, ತಕ್ಷಣ ಪಾರ್ಟಿ ಮಾಡಿ ಅಂದಿದ್ದಾರೆ. ಎಲೆಕ್ಷನ್ ಮುಗಿಯೋವರಗೆ ಸಿನಿಮಾ ಚಟುವಟಿಕೆ ಇಲ್ಲ. ಸದ್ಯಕ್ಕೆ ಹೋಮ್ ಮಿನಿಸ್ಟರ್ ಎಂಬ ಸಿನಿಮಾದ ಒಂದು ಸಾಂಗ್ ಬಾಕಿ ಇದೆ. ಅದನ್ನು ಶೀಘ್ರವೇ ಮುಗಿಸ್ತೇನೆ. ಉಳಿದ ಚಿತ್ರಗಳೆಲ್ಲ ಆಮೇಲೆ.

★ *ನೀವು ಕುಂದಾಪುರದಲ್ಲಿ ಸ್ಪರ್ಧಿಸ್ತೀರಿ ಅಂತ ಸುದ್ದಿ ಇದೆ?*

ಗೊತ್ತಿಲ್ಲ. ಮೊದಲು ಎಲ್ಲ ಕ್ಷೇತ್ರಗಳಿಗೆ ಅಭ್ಯರ್ಥಿಗಳ ಆಯ್ಕೆ ಮಾಡ್ತೀನಿ. ಉಳಿದ್ರೆ ನಾನು ಎಲ್ಲಾದರೂ ನಿಂತ್ಕೋತೀನಿ. ನಾನು ನಿಲ್ಲುವ ಕ್ಷೇತ್ರದ ಬಗ್ಗೆಯೂ ರಿಸರ್ಚ್ ಮಾಡಬೇಕು.

★ *ಕುಂದಾಪ್ರ ಕನ್ನಡ ಮಾತಾಡ್ತೀರಾ?*

ಸ್ವಲ್ಪ ಸ್ವಲ್ಪ. ಮನೇಲಿ ಮಾತಾಡ್ತಾರೆ.

★ *ಮಕ್ಕಳು ಏನು ಮಾಡ್ತಿದಾರೆ ಸಾರ್?*

ದೊಡ್ಡವ 7ನೇ ಕ್ಲಾಸ್. ಇನ್ನೊಬ್ಬಳು ಹುಡುಗಿ 6ನೇ ಕ್ಲಾಸ್. ವ್ಯಾಲಿ ಸ್ಕೂಲ್‌ನಲ್ಲಿ ಓದ್ತಿದಾರೆ.